ಅ) ನಿಜ.

ಇ) ಈ ರಸ್ತೆಯನ್ನು ಮೇಲ್ದರ್ಜೆಗೇರಿಸುವುದರ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆ.

ಈ) ಒಂದೊಂದೇ ರಸ್ತೆಯನ್ನು ಮೇಲ್ದರ್ಜೆಗೇರಿಸಲಾಗದು. ಒಟ್ಟಾರೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ನಿರ್ಧಾರ ತೆಗೆದುಕೊಳ್ಳುವ ಹಂತದಲ್ಲಿದೆ.

ತುರುವೇಕೆರೆ ತಾಲ್ಲೂಕು ಸಂಪಿಗೆ ಆರೋಗ್ಯ ತಪಾಸಣಾ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

4102 (4505) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ (ತುರುವೇಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿ ಸಂಪಿಗೆ ಆರೋಗ್ಯ ತಪಾಸಣಾ ಆಸ್ಪತ್ರೆಗೆ ಜನಸಂದಣಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರ ವಿಳಂಬ ಮಾಡಲು ಕಾರಣವೇನು;

ಇ) ಈ ಭಾಗದಲ್ಲಿ ಇರುವ ಆಸ್ಪತ್ರೆಯ ಸೇವೆ ಬಹಳ ಅವಶ್ಯಕವಾಗಿರುವಾಗ ತಕ್ಷಣ ಮೇಲ್ದರ್ಜೆಗೆ ಏರಿಸಲಾಗುವುದೇ;

ಈ) ಈ ವರ್ಷ ಮಾಡಲಾಗುವುದೇ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಂಪಿಗೆಯಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಇದ್ದು ದಂಡಿನ ಶಿವಾರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೇರಿದ್ದು ದಿನ ಒಂದಕ್ಕೆ 30 ರಿಂದ 35 ಹೊರ ರೋಗಿಗಳನ್ನು ನೋಡಲಾಗುತ್ತಿದೆ. ತುರುವೇಕೆರೆ ತಾಲ್ಲೂಕಿನ ಜನರ ಸಂಖ್ಯೆ 1,73,615 ಇದ್ದು 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 3 ಪ್ರಾಥಮಿಕ ಆರೋಗ್ಯ ಘಟಕಗಳು ಕೆಲಸ ನಿರ್ವಹಿಸುತ್ತಿದ್ದು ಅವಶ್ಯಕತೆಗಿಂತ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿರುತ್ತವೆ. ಮೇಲ್ದರ್ಜೆಗೇರಿಸುವ ಪ್ರಸ್ತಾಪವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ತುರುವೇಕೆರೆ ನಗರದಲ್ಲಿ ಶಾಲಾ ಕೊಠಡಿ ಕೊರತೆ

4103 (4506) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ಅಣ್ಣಯ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ನಗರದಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಸಂಖ್ಯೆ ಎಷ್ಟು;

ಆ) ಹಾಗಿದ್ದಲ್ಲಿ, ಶಾಲೆಯಲ್ಲಿ ಇರುವ ಕೊಠಡಿಗಳು ಸಾಕಾಗುತ್ತಿವೆಯೇ;

ಇ) ಮಕ್ಕಳು ಮರದ ಕೆಳಗೆ ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇದುವರೆವಿಗೂ ಶಾಲೆಯ ಅಭಿವೃದ್ಧಿ ಹಾಗೂ ಶಾಲೆಗೆ ಅವಶ್ಯಕತೆಯಿರುವ ಕೊಠಡಿಗಳನ್ನು ಮಂಜೂರು ಮಾಡುವುದೇ;

ಉ) ಮಳೆಗಾಲದಲ್ಲಿ ಮಕ್ಕಳು ಎಲ್ಲಿ ವ್ಯಾಸಂಗ ಮಾಡಬೇಕು;

ಊ) ತಕ್ಷಣ ಗಮನಹರಿಸಿ ಅವಶ್ಯಕತೆ ಇರುವಷ್ಟು ಕೊಠಡಿಗಳನ್ನು ಈ ವರ್ಷದಲ್ಲಿ ಕಟ್ಟಿಸಲಾಗುವುದೇ; ಯಾವಾಗ ಮಾಡಲಾಗುವುದು?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 442 ವಿದ್ಯಾರ್ಥಿಗಳು ತುರುವೇಕೆರೆ ನಗರದಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುತ್ತಾರೆ.

ಆ) ಈ ಕಾಲೇಜುನಲ್ಲಿ ಇರುವ ಒಟ್ಟು 28 ಕೊಠಡಿಗಳಲ್ಲಿ 14 ಕೊಠಡಿಗಳನ್ನು ಪದವೀ ಕಾಲೇಜಿಗೆ (ಪ್ರಥಮ ದರ್ಜೆ ಕಾಲೇಜಿಗೆ) ಎರವಲು ನೀಡಿರುವುದರಿಂದ ಸಾಕಾಗುತ್ತಿಲ್ಲ.

ಇ) ತಾತ್ಕಾಲಿಕವಾಗಿ ಈ ಸಮಸ್ಯೆ ಉದ್ಭವಿಸಿತ್ತು.

ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಕೊಠಡಿಗಳನ್ನು ಮಂಜೂರು ಮಾಡಲಾಗುವುದು.

ಉ) ಕಾಲೇಜು ವಿಭಾಗ ಮತ್ತು ಪ್ರೌಢಶಾಲಾ ತರಗತಿಗಳನ್ನು ಪಾಳಿಪದ್ಧತಿಯಲ್ಲಿ ನಡೆಸಿ ಎಲ್ಲಾ ಮಕ್ಕಳು ಕೊಠಡಿಯೊಳಗೆ ಕುಳಿತು ವ್ಯಾಸಂಗ ಮಾಡುವ ವ್ಯವಸ್ಥೆ ಮಾಡಲಾಗುವುದು.

ಊ) ಅನುದಾನದ ಲಭ್ಯತೆಯನ್ನು ಆಧರಿಸಿ ಕೊಠಡಿಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಅಕ್ಷರ ದಾಸೋಹ ಯೋಜನೆ ಅನುಷ್ಠಾನ

4104 (4571) : ಶ್ರೀ ನಾರಾಯಣ ಸ್ವಾಮಿ ಎ (ಆನೇಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ಷರ ದಾಸೋಹ ಅಥವಾ ಬಿಸಿ ಊಟ ಯೋಜನೆ ಅನುಷ್ಠಾನ ಆಗಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸದರಿ ಯೋಜನೆಯಡಿಯಲ್ಲಿ ಪ್ರತಿ ಶಾಲೆಗೆ ಪಾಕ ಶಾಲೆ ಒದಗಿಸಲಾಗಿದೆಯೆ; ಒದಗಿಸದಿದ್ದಲ್ಲಿ, ಪಾಠಶಾಲೆಯ ಕೊರತೆಯ ಕಾರಣಗಳೇನು?

ಇ) ಪಾಠಶಾಲೆ ಮತ್ತು ಇತರೆ ಸಲಕರಣೆ ಇಲ್ಲದೆ ಯೋಜನೆ ಪ್ರಾರಂಭಿಸಿದ ಶಾಲೆಗಳ ಪಟ್ಟಿ ಒದಗಿಸುವುದು;

ಈ) ಸದರಿ ಯೋಜನೆಯಿಂದಾಗಿ ಪಾಠ ಪ್ರವಚನಗಳಿಗೆ ಆಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ನಿಜ.

ಆ) ಈ ಯೋಜನೆಯಡಿಯಲ್ಲಿ ಪ್ರತಿ ಶಾಲೆಗೆ ಪಾಠಶಾಲೆಗಳನ್ನು ಒದಗಿಸಲಾಗಿಲ್ಲ. ಒಂದಕ್ಕಿಂತ ಹೆಚ್ಚು ಶಾಲೆಗಳು ಇರುವ ಗ್ರಾಮ/ಪಟ್ಟಣ/ತಾಲ್ಲೂಕು ಕೇಂದ್ರ/ಜಿಲ್ಲಾ ಕೇಂದ್ರ ಹಾಗೂ ಮುನಿಸಿಪಲ್ ಪ್ರದೇಶದಲ್ಲಿ ಎಲ್ಲಾ ಶಾಲೆಗಳಿಗೂ ಅನ್ವಯಿಸುವಂತೆ ಕೇಂದ್ರ ಅಡಿಗೆ ಮನೆಯನ್ನು ಸ್ಥಾಪಿಸಿ ಅಲ್ಲಿ ಒಂದು ಕೇಂದ್ರದಿಂದ ಒಟ್ಟು ಮಕ್ಕಳಿಗೆ ಸಾಕಾಗುವ ಆಹಾರವನ್ನು ತಯಾರಿಸಿ ಆಯಾ ಶಾಲೆಗಳಿಗೆ ಸರಿಯಾದ ಸಮಯಕ್ಕೆ ವಿತರಿಸಲು ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪಾಠಶಾಲೆಯನ್ನು ಕಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.